ಆರ್.ಐ.ಡಿ.ಎಫ್–14ರ ಯೋಜನೆಯಡಿ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಈ ಸೇತುವೆಯು ಗ್ರಾಮೀಣ ರಸ್ತೆಯ ಮೇಲೆ ಬರುತ್ತದೆ. ಈ ಕಾಮಗಾರಿಯು ಆರ್.ಐ.ಡಿ.ಎಫ್–14ರ ಕ್ರಿಯಾ ಯೋಜನೆಯಲ್ಲಿ ಸೇರಿರುವುದಿಲ್ಲವಾದ್ದರಿಂದ ಪ್ರಸ್ತುತ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿಲ್ಲ.

**215 ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)**
**ಮಾನ್ಯ ಲೋಕೋಪಯೋಗಿ ಸಚಿವರು**

ಅ) ಕಾಪು ವಿಧಾನಸಭಾ ಕ್ಷೇತ್ರದ ಕುಕ್ಕೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಂಪಲ್ಲಿ–ಪರೀಕ ಮಧ್ಯೆಯ ಸುವರ್ಣ ನದಿಗೆ ಸೇತುವೆಯನ್ನು ನಿರ್ಮಿಸಲು ಕೆ.ಆರ್.ಡಿ.ಸಿ.ಎಲ್ ಮುಖಾಂತರ 320 ಲಕ್ಷ ರೂಪಾಯಿಗಳಿಗೆ ಪ್ರಸ್ತಾವನೆ ಅನುಮೋದಿಸಲ್ಪಟ್ಟಿದೆಯೇ;

ಕಾಪು ವಿಧಾನಸಭಾ ಕ್ಷೇತ್ರದ ಕುಕ್ಕೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಂಪಲ್ಲಿ–ಪರೀಕ ಮಧ್ಯೆ ಸುವರ್ಣ ನದಿಗೆ ಸೇತುವೆಯ ನಿರ್ಮಾಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ರೂ.4.08 ಕೋಟಿಗಳ ಮೊತ್ತದಲ್ಲಿ ತೆಗೆದುಕೊಳ್ಳಲು ಯೋಜಿಸಿದೆ.

ಆ) ಅನುಮೋದಿಸಲ್ಪಟ್ಟಿದ್ದಲ್ಲಿ ಈ ಕಾಮಗಾರಿ ಆರಂಭವಾಗಿದೆಯೇ?

ಈ ಸೇತುವೆಯ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿದ್ದು, ಸಮಾಲೋಚಕರು ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿದ್ದು, ವರದಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ತಾಂತ್ರಿಕ ಸಮಿತಿ ಮತ್ತು ಮಂಡಳಿ ಅನುಮೋದನೆಯಾದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

**219 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)**
**ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.**

ಅ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸುಧಾರಿತ ನೀರು ಸರಬರಾಜು ಯೋಜನೆಯಡಿಯಲ್ಲಿ (ಆರ್.ಸಿ.ಸಿ. ವೆಂಟೆಡ್ ಬ್ಯಾರೇಜ್) ಕಾಮಗಾರಿಗೆ ಯಾವಾಗ ಅನುಮೋದನೆ ನೀಡಲಾಯಿತು; ಇದರ ಯೋಜನಾ ವೆಚ್ಚ ಎಷ್ಟು; ಇದಕ್ಕೆ ಎಷ್ಟು ಕಾಲಮಿತಿಯನ್ನು ನಿಗಧಿಪಡಿಸಲಾಗಿತ್ತು?

ಬೀದರ ಜಿಲ್ಲೆಯ ಭಾಲ್ಕಿ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಮಾಡುವ ಯೋಜನೆಯನ್ನು ಅಂದಾಜು ರೂ.603.02 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಯೋಜನೆಯಡಿಯಲ್ಲಿ ಕಲವಾಡಿ ಗ್ರಾಮದ ಹತ್ತಿರ ಕಾರಂಜಾ ನದಿಗೆ ಅಡ್ಡಲಾಗಿ ಆರ್.ಸಿ.ಸಿ.ವೆಂಟೆಡ್ ಬ್ಯಾರೇಜ್ ನಿರ್ಮಿಸುವ ಅಂದಾಜು ವೆಚ್ಚ ರೂ.124.50 ಲಕ್ಷಗಳ ಕಾಮಗಾರಿಗೆ ಮಂಡಳಿಯಿಂದ ದಿನಾಂಕ:25.12.2005 ರಂದು ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು 6 ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿತ್ತು.

ಆ ಈಗ ಈ ಯೋಜನೆ ಯಾವ ಹಂತದಲ್ಲಿದೆ; ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆಯೇ?

ಯೋಜನೆಯ ಉಳಿದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅಕ್ಟೋಬರ್–2006ರಲ್ಲಿ ಚಾಲನೆಗೊಳಿಸಲಾಗಿದೆ. ಬ್ಯಾರೇಜ್ ಕಾಮಗಾರಿ ಶೇಕಡ 80 ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿದೆ.

ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯು ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 68 ಯುಡಬ್ಲ್ಯೂಎಸ್ 2001 ದಿನಾಂಕ:29.11.2001 ರಲ್ಲಿ ನೀಡಲಾಗಿದೆ.

ಇ ಕಾಮಗಾರಿ ಪ್ರಾರಂಭಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಯಿತು? ಇದಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಕಾಮಗಾರಿ ವಿಳಂಬವಾಗಲು ಕಾರಣವೇನು?

ಕಾರಂಜಾ ನದಿಗೆ ಅಡ್ಡಲಾಗಿ ಆರ್.ಸಿ.ಸಿ ವೆಂಟೆಡ್ ಬ್ಯಾರೇಜ್ ನಿರ್ಮಿಸುವ ಕಾಮಗಾರಿಯನ್ನು ದಿನಾಂಕ:18.02.2006 ರಂದು ಪ್ರಾರಂಭಿಸಲಾಗಿದೆ. ಈ ಕಾಮಗಾರಿಗಾಗಿ ಇದುವರೆಗೆ ರೂ.81.14 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಕಾರಂಜಾ ನದಿಯಲ್ಲಿ ಆಗಿಂದಾಗ್ಗೆ ಉಂಟಾಗುತ್ತಿರುವ ಅನಿರೀಕ್ಷಿತ ಪ್ರವಾಹಗಳು ಹಾಗೂ ಕಾರಂಜಾ ಜಲಾಶಯದಿಂದ ನೀರು ಬಿಡುಗಡೆ ಮಾಡಿರುವುದರಿಂದ ಮತ್ತು ನದಿ ಪಾತ್ರದಲ್ಲಿ ಕಾಮಗಾರಿಯ ತಳಪಾಯದ ಕೆಲಸಗಳಲ್ಲಿ ಉಂಟಾದ ತಾಂತ್ರಿಕ ಅಡಚಣೆಗಳಿಂದ ಈ ಕಾಮಗಾರಿಯು ವಿಳಂಬವಾಗಿರುತ್ತದೆ.

ಈ ಈ ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಸಮಯದ ಅವಶ್ಯಕತೆ ಇದೆ? ಕಾಮಗಾರಿ ಪೂರ್ಣಗೊಂಡಾಗ ಪಟ್ಟಣದ ಎಷ್ಟು ಜನಸಂಖ್ಯೆಗೆ ಕುಡಿಯುವ ನೀರಿನ ಸೌಲಭ್ಯ ದೊರಯಲಿದೆ?

ಈ ಕಾಮಗಾರಿಯನ್ನು ಮಾರ್ಚ್‌2009ರ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಭಾಲ್ಕಿ ಪಟ್ಟಣದ 2031ನೇ ಸಾಲಿಗೆ ಅಂದಾಜಿಸಿದ 60,000 ಜನಸಂಖ್ಯೆಗೆ ತಲಾ ದಿನಂಪ್ರತಿ 113 ಲೀಟರ್ ನಂತೆ ನೀರು ಸರಬರಾಜು ಮಾಡಬಹುದಾಗಿದೆ.

**220 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)**
**ಲೋಕೋಪಯೋಗಿ ಸಚಿವರು**

ಅ) ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಕಳಪೆ ದರ್ಜೆಯ ಕಾಮಗಾರಿಗಳ ಬಗ್ಗೆ ಲೋಕಾಯುಕ್ತರಿಂದ ತನಿಖೆಗೆ ಆದೇಶ ನೀಡಿರುವುದು ನಿಜವೇ, ಯಾವಾಗ ಈ ಆದೇಶವನ್ನು ನೀಡಲಾಯಿತು.

ಕಳಪೆ ದರ್ಜೆಯ ಕಾಮಗಾರಿಗಳ ಬಗ್ಗೆ ಲೋಕಾಯುಕ್ತರಿಂದ ತನಿಖೆಗೆ ಆದೇಶ ನೀಡಿರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳ ಕಾಮಗಾರಿಗಳ ಬಗ್ಗೆ ಈ ತನಿಖೆಗೆ ಆದೇಶ ನೀಡಲಾಗಿದೆ.

ಅನ್ವಯಿಸುವುದಿಲ್ಲ.

ಇ) ಈ ಕಾಮಗಾರಿಗಳ ವಿವರಗಳೇನು; ಇದಕ್ಕಾಗಿ ಸರ್ಕಾರವು ವೆಚ್ಚ ಮಾಡಿರುವ ಹಣವೆಷ್ಟು?

ಇಲ್ಲ.

ಈ) ಲೋಕಾಯುಕ್ತ ತನಿಖೆಯು ಈಗ ಯಾವ ಹಂತದಲ್ಲಿದೆ; ಈ ಕಳಪೆ ದರ್ಜೆಯ ಕಾಮಗಾರಿಗಳ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಇತರೆ ವ್ಯಕ್ತಿಗಳ ವಿವರಗಳೇನು;

ಇಲ್ಲ.

ಉ) ಇದುವರೆವಿಗೂ ಎಷ್ಟು ಜನರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ?

ಇಲ್ಲ.

**221 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**
**ಲೋಕೋಪಯೋಗಿ ಸಚಿವರು**

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಬಹುತೇಕ ರಸ್ತೆಗಳು ಅಪೂರ್ಣ ಕಾಮಗಾರಿಗಳಿಂದ ಕೂಡಿದ್ದು ಹಾಗೂ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;